# ಶ್ರೀ ವಿಜಯರಾಯರ ಕವಚ

ಶ್ರೀಅಸ್ಮದ್ಗುರ್ವಂತರ್ಗತ ಶ್ರೀಜಗನ್ನಾಥದಾಸಗುರ್ವಂತರ್ಗತ
ಶ್ರೀವಿಜಯದಾಸಗುರುಭ್ಯೋನಮಃ

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ ॥ಪ॥
ದಾಸರಾಯನ ದಯವ ಸೂಸಿ ಪಡೆದನ
ದೋಷರಹಿತನ ಸಂತೋಷಭರಿತನ ॥1॥
ಜ್ಞಾನವಂತನ ಬಲುನಿಧಾನಿ ಶಾಂತನ
ಮಾನವಂತನ ಬಹುವದಾನ್ಯ ದಾಂತನ ॥2॥
ಹರಿಯ ಭಜಿಸುವ ನರಹರಿಯ ಯಜಿಸುವ
ದುರಿತ ತ್ಯಜಿಸುವ ಜನಕೆ ಹರುಷ ಸುರಿಸುವ ॥3॥
ಮೋದಭರಿತನ ಪಂಚಭೇದವರಿತನ
ಸಾಧುಚರಿತನ ಮನೋ ವಿಷಾದ ಮರೆತನ ॥4॥
ಇವರ ನಂಬಿದ ಜನಕೆ ಭವವಿದೆಂಬುದು
ಹವಣವಾಗದು ನಮ್ಮವರ ಮತವಿದು ॥5॥
ಪಾಪಕೋಟಿಯ ರಾಶಿ ಲೇಪವಾಗದು
ತಾಪ ಕಳೆವನು ಬಲು ದಯಾಪಯೋನಿಧಿ ॥6॥
ಕವನರೂಪದಿ ಹರಿಯ ಸ್ತವನ ಮಾಡಿದ
ಭುವನ ಬೇಡಿದ ಮಾಧವನ ನೋಡಿದ ॥7॥
ರಂಗನೆಂದನ ಭವವು ಹಿಂಗಿತೆಂದನ
ಮಂಗಳಾಂಗನ ಅಂತರಂಗವರಿತನ ॥8॥
ಕಾಶಿನಗರದಲ್ಲಿದ್ದ ವ್ಯಾಸದೇವನ
ದಯವ ಸೂಸಿ ಪಡೆದನ ಉಲ್ಲಾಸತನದಲಿ ॥9॥
ಚಿಂತೆ ಬ್ಯಾಡಿರೊ ನಿಶ್ಚಿಂತರಾಗಿರೋ
ಶಾಂತಗುರುಗಳ ಪಾದವಾಂತು ನಂಬಿರೊ ॥10॥
ಖೇದವಾಗದು ನಿಮಗೆ ಮೋದವಾಹುದು
ಆದಿದೇವನ ಸುಪ್ರಸಾದವಾಹುದು ॥11॥
ತಾಪ ತಡೆವನು ಬಂದ ಪಾಪ ಕಡಿವನು
ಶ್ರೀಪತೀಶನ ಪದಸಮೀಪವಿಡುವನು ॥12॥
ವೇದ ಓದಲು ಬರಿದೆ ವಾದ ಮಾಡಲು
ಹಾದಿ ದೊರೆಯದು ಬುಧರ ಪಾದ ನಂಬದೆ ॥13॥
ಗಂಗೆ ಮಿಂದರೆ ಮಲವು ಹಿಂಗಿತಲ್ಲದೆ
ರಂಗನೊಲಿಯನು ಭಕ್ತರ ಸಂಗ ದೊರೆಯದೆ ॥14॥

ಲೆಕ್ಕವಿಲ್ಲದಾ ದೇಶ ತುಕ್ಕಿ ಬಂದರು
ದುಃಖವಲ್ಲದೆ ಲೇಶ ಭಕ್ತಿ ದೊರಕದು ||15||
ದಾನ ಮಾಡಲು ದಿವ್ಯಗಾನ ಪಾಡಲು
ಜ್ಞಾನ ದೊರೆಯದು ಇವರಧೀನವಾಗದೆ ||16||
ನಿಷ್ಠೆ ಯಾತಕೆ ಕಂಡ ಕಷ್ಟವ್ಯಾತಕೆ
ದಿಟ್ಟ ಗುರುಗಳ ಪಾದ ಮುಟ್ಟಿ ಭಜಿಸಿರೊ ||17||
ಪೂಜೆ ಮಾಡಲು ಕಂಡ ಗೋಜು ಬೀಳಲು
ಬೀಜ ಮಾತಿನ ಫಲ ಸಹಜ ದೊರಕದು ||18||
ಸುರರು  ಎಲ್ಲರು ಇವರ ಕರವ ಪಿಡಿವರೊ
ತರಳರಂದದಿ ಹಿಂದೆ ತಿರುಗುತಿಪ್ಪರು ||19||
ಗ್ರಹಗಳೆಲ್ಲವು ಇವರ್ಗೆ ಸಹಾಯ ಮಾಡುತ
ಅಹೋರಾತ್ರಿಲಿ ಸುಖದ ನಿವಹ ಕೊಡುವವು ||20||
ವ್ಯಾಧಿ ಬಾರದೊ ದೇಹಬಾಧೆ ತಟ್ಟದೊ
ಆದಿದೇವನ ಸುಪ್ರಸಾದವಾಹುದೊ ||21||
ಪತಿತಪಾಮರ ಮಂದಮತಿಯು ನಾ ಬಲು
ತುತಿಸಲಾಪನೆ ವರ ಅತಿಶಯಂಗಳ ||22||
ಕರುಣದಿಂದಲಿ  ಎಮ್ಮ ಪೊರೆವನಲ್ಲದೆ
ದುರಿತಕೋಟಿಯ ಬೇಗ ತರಿವ ದಯದಲಿ ||23||
ಮಂದಮತಿಗಳು ಇವರ ಛಂದವರಿಯದೆ
ನಿಂದಿಸುವರು ಭವದ ಬಂಧ ತಪ್ಪದು ||24||
ಇಂದಿರಾಪತಿ ಇವರ ಮುಂದೆ ಕುಣಿವನು
ಅಂದ ವಚನವ ನಿಜಕೆ ತಂದು ತೋರ್ಪನು ||25||
ಉದಯಕಾಲದಿ ಈ ಪದವ ಪಠಿಸಲು
ಮದಡನಾದರು ಜ್ಞಾನ ಉದಯವಾಹುದು ||26||
ಸಟೆಯಿದಲ್ಲವೊ ವ್ಯಾಸವಿಠಲ ಬಲ್ಲನೊ
ಪಠಿಸಬಹುದಿದು ಕೇಳಿ ಕುಟಿಲರಹಿತರು ||27||

ಶ್ರೀವಿಜಯದಾಸಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು